ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2014-15 ಸಾಲಿನಲ್ಲಿ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2013-14ನೇ ಸಾಲಿನ ಎರಡನೇ ಮತ್ತು ಕೊನೆಯ ಕಂತು ಬಾಕಿ ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ : 1) ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ ನವದೆಹಲಿ ಇವರ ಬಿಡುಗಡೆ ಆದೇಶ ಪತ್ರ ಸಂಖ್ಯೆ : No.5-40/2013-BE dated 13.06.2014.

2) ಹಣಕಾಸು ಇಲಾಖೆಯ ಸಿ.ಸಿ.ಎಸ್. ಪತ್ರ ಸಂಖ್ಯೆ : ಎಫ್.ಡಿ./25/ಬಿ.ಜಿ.ಎಲ್./2014 ದಿನಾಂಕ 21.06.2014

ಪ್ರಸ್ತಾವನೆ :

2014-15 ಸಾಲಿನಲ್ಲಿ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2013-14ನೇ ಸಾಲಿಗೆ ಎರಡನೇ ಕಂತು ರೂ.400.00 ಲಕ್ಷಗಳ ಕೇಂದ್ರ ಸಹಾಯಧನವನ್ನು ಉಲ್ಲೇಖದ ಪತ್ರಗಳಲ್ಲಿ ಬಿಡುಗಡೆ ಮಾಡಲಾಗಿದೆ.

ಪ್ರಸ್ತುತ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಎರಡನೇ ಕಂತು ರೂ.400.00 ಲಕ್ಷ ಅನುದಾನವನ್ನು 2013-14ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಲ್ಲಿನ ಕೇಂದ್ರ ಸಹಾಯಧನ ಬಾಕಿ ಕ್ಲೇಮುಗಳ ಪಾವತಿಗಾಗಿ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. 2013-14ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ಗಳು ಸಾಧಿಸಿರುವ ಭೌತಿಕ ಪ್ರಗತಿಗನುಗುಣವಾಗಿ ಎರಡನೇ ಕಂತು ಕೇಂದ್ರ ಸಹಾಯಧನವನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 44 ಜೈಅಯೋ 2014, ಬೆಂಗಳೂರು, ದಿನಾಂಕ : 18.10.2014**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2014-15ನೇ ಸಾಲಿನಲ್ಲಿ 2013-14ನೇ ಸಾಲಿನ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಪಾಲಿನ ಎರಡನೇ ಕಂತು ಬಾಕಿ ಕೇಂದ್ರ ಸಹಾಯಧನ **ರೂ.395.406 ಲಕ್ಷಗಳನ್ನು (ರೂ. ಮೂನ್ನೂರ ತ್ತೊಂಬತ್ತೈದು ಲಕ್ಷದ ನಲವತ್ತು ಸಾವಿರದ ಆರು ನೂರು ಮಾತ್ರ)** ಇದರೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ನಮೂದಿಸಲಾದಂತೆ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಮುಂದುವರೆದು ರೂ.4.594ಲಕ್ಷ ಕೇಂದ್ರ ಸಹಾಯಧನವನ್ನು ಯೋಜನೆಯ ಆಡಳಿತಾತ್ಮಕ ವೆಚ್ಚಗಳಿಗಾಗಿ ಸರ್ಕಾರ ಸೂಚಿಸುವ ಬಾಬ್ತಿಗೆ ವೆಚ್ಚ ಮಾಡಲು ಅನುಬಂಧದಲ್ಲಿ ತೋರಿರುವಂತೆ ಪ್ರತ್ಯೇಕವಾಗಿ ಬಿಡುಗಡೆ ಮಾಡಿದೆ.

ಹಾಲಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ವಿನಿಯೋಗಿಸತಕ್ಕದ್ದು. ಹಾಗೂ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾದ ಕೇಂದ್ರ ಸಹಾಯಧನಕ್ಕೆ ಸಿ.ಎ.ರವರಿಂದ ಆಡಿಟ್ ಮಾಡಿಸಿ, ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಬಿಡುಗಡೆ ಮಾಡಿದ ಅನುದಾನವನ್ನು ಲೆಕ್ಕ ಶೀರ್ಷಿಕೆ 2810-60-196-6-01 (2810-00-101-0-01) ಯೋಜನೆಯಡಿ ವೆಚ್ಚ ಭರಿಸತಕ್ಕದ್ದು. ಸದರಿ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ವೆಚ್ಚ ಭರಿಸಿ, ಈ ಅನುದಾನ ಬಳಕೆ ಮಾಡಿ ಕೊಂಡಿರುವ ಫಲಾನುಭವಿಗಳ ವಿವರಗಳನ್ನು ಕಡ್ಡಾಯವಾಗಿ ಇಲಾಖೆಯ / ಜಿ.ಪಂ. / ಗ್ರಾಪಂ.ನ ಅಂತರ್ಜಾಲದಲ್ಲಿ ಅಳವಡಿಸತಕ್ಕದ್ದು. ಹಾಗೂ ಮುಂದೆ ಯಾವುದೇ ಸಂಧರ್ಭದಲ್ಲಿ ಹಣ ದುರ್ಬಳಕೆಯ ಅಕ್ರಮವೆಸಗಿರುವುದು ಕಂಡುಬಂದಲ್ಲಿ ನಿಯಮಾನುಸಾರ ವಸೂಲಾತಿ ಮಾಡತಕ್ಕದ್ದು.

ಫಲಾನುಭವಿಗಳ ವಿವರಗಳನ್ನು ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ. ಮಂತ್ರಾಲಯ ಸೂಚಿಸಿರುವ 15 ಅಂಕಣಗಳ ತಖ್ತೆಯಲ್ಲಿ ಫಲಾನುಭವಿಗಳ ಫೋಟೋನೊಂದಿಗೆ ಇಲಾಖೆಯ ವೆಬ್‌ಸೈಟ್‌ಗೆ ಅಪ್ ಲೋಡ್ ಮಾಡಿದ ನಂತರವೇ ಬಾಕಿ ಇರುವ ಮುಂದಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗ ಪಲ್ಲಟ ಮಾಡತಕ್ಕದ್ದಲ್ಲ.

ಷರತ್ತು ಮತ್ತು ನಿಬಂಧನೆಗಳು :-

1. ಯೋಜನೆಯ ಮಾರ್ಗಸೂಚಿಯನ್ವಯ ಪ್ರತಿ ಜಿಲ್ಲೆಯ ಪ್ರತಿಯೊಂದು ಅನಿಲ ಸ್ಥಾವರದ ಜಿ.ಪಿ.ಎಸ್.ನಲ್ಲಿ ಫಲಾನುಭವಿಗಳ ಫೋಟೋ ಮತ್ತು ವಿವರಗಳನ್ನು ದಾಖಲಾತಿ ರಿಜಿಸ್ಟರ್‌ನಲ್ಲಿ ದಾಖಲಿಸುವುದು.
2. ಪ್ರತಿಯೊಂದು ಅನಿಲ ಸ್ಥಾವರ ಘಟಕಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಫಲಾನುಭವಿವಾರು ಕಡತ ನಿರ್ವಹಿಸತಕ್ಕದ್ದು.
3. ಫಲಾನುಭವಿಗಳ ವಿವರ ಮತ್ತು ಆರ್ಥಿಕ/ ಭೌತಿಕ ಪ್ರಗತಿ ವಿವರಗಳನ್ನು ಕಡ್ಡಾಯವಾಗಿ ಪರಿಶೀಲನಾ ಸಭೆಯಲ್ಲಿ ಮಂಡಿಸುವುದು ಹಾಗೂ ಪಂಚತಂತ್ರ ಸಾಫ್ಟ್‌ವೇರ್‌ನಲ್ಲಿ ಅಳವಡಿಸತಕ್ಕದ್ದು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಉಪ ಕಾರ್ಯದರ್ಶಿ (ಅಭಿವೃದ್ಧಿ) ಅವರ ಹಂತದಲ್ಲಿ ಶೇ. 10%ಕ್ಕಿಂತ ಕಡಿಮೆ ಇಲ್ಲದಂತೆ ಸ್ಥಾವರಗಳನ್ನು ಪರಿವೀಕ್ಷಣೆ ಮಾಡುವುದು.
5. ಮಾರ್ಗಸೂಚಿಗಳನ್ವಯ ಪರಿವೀಕ್ಷಣೆ ಮಾಡಲಾದ ವಿವರಗಳ ಬಗ್ಗೆ ಒಂದು ಸವಿವರವಾದ ವರದಿಯನ್ನು ಟಿಪ್ಪಣಿಯೊಂದಿಗೆ ನಿರ್ದೇಶಕರು, ಗ್ರಾಮೂಸೌ-2 ರವರಿಗೆ ಸಲ್ಲಿಸತಕ್ಕದ್ದು.
6. ಯೋಜನೆಯ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಮತ್ತು ಇದರ ಪಾಲನೆಯ ಸಂಪೂರ್ಣ ಜವಾಬ್ದಾರಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ನಿರ್ವಹಿಸತಕ್ಕದ್ದು.
7. ಪ್ರತಿ ಮಾಹೆಯಾನ 5ನೇ ದಿನಾಂಕದೊಳಗೆ ಪ್ರಗತಿ ವರದಿ ಸಲ್ಲಿಸತಕ್ಕದ್ದು.

ಪ್ರಗತಿ ಹಾಗೂ ಪಾವತಿ ವಿವರಗಳನ್ನು "ಗಾಂಧಿ ಸಾಕ್ಷಿ ಕಾಯಕ" ತತ್ರಾಂಶದಲ್ಲಿ ಅಳವಡಿಸುವುದು.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಗ್ರಾಅಪ 609 ಪಿಬಿಎಸ್ 2014 ದಿನಾಂಕ 14.10.2014 ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂದಿಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪ- ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು(ನ), ಬೆಳಗಾಂ, ಬೀದರ್, ಬಳ್ಳಾರಿ, ಬಿಜಾಪುರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಗುಲ್ಬರ್ಗಾ, ಹಾವೇರಿ, ಉಡುಪಿ, ಮಂಡ್ಯ, ರಾಮನಗರ, ರಾಯಚೂರು, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆ.
3. ಉಪ ಕಾರ್ಯದರ್ಶಿ (ಅಭಿವೃದ್ಧಿ) / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು(ನ), ಬೆಳಗಾಂ, ಬೀದರ್, ಬಳ್ಳಾರಿ, ಬಿಜಾಪುರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಗುಲ್ಬರ್ಗಾ, ಹಾವೇರಿ, ಉಡುಪಿ, ಮಂಡ್ಯ, ರಾಮನಗರ, ರಾಯಚೂರು, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆ.
4. ಜಿಲ್ಲಾ ಖಜಾನಾಧಿಕಾರಿಗಳು, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು(ನ), ಬೆಳಗಾಂ, ಬೀದರ್, ಬಳ್ಳಾರಿ, ಬಿಜಾಪುರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಗುಲ್ಬರ್ಗಾ, ಹಾವೇರಿ, ಉಡುಪಿ, ಮಂಡ್ಯ, ರಾಮನಗರ, ರಾಯಚೂರು, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆ.
5. ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
6. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
8. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

## ಅನುಬಂಧ

*ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 44 ಜೈಅಯೋ 2014 ದಿನಾಂಕ 18.10.2014*

**2014–15 ನೇ ಸಾಲಿನಲ್ಲಿ 2013–14ನೇ ಸಾಲಿನ ಎರಡನೇ ಕಂತು ಬಾಕಿ ಕೇಂದ್ರ ಸಹಾಯಧನ ಬಿಡುಗಡೆಯ ವಿವರಗಳು :**

| ಕ್ರ. ಸಂ. | ಜಿಲ್ಲೆ | ಬಿಡುಗಡೆ ಮಾಡಿದ ಬಾಕಿ ಕೇಂದ್ರ ಸಹಾಯಧನ (ರೂ. ಲಕ್ಷಗಳಲ್ಲಿ) |
|---|---|---|
| 1 | ಬಾಗಲಕೋಟೆ | 23.664 |
| 2 | ಬೆಂಗಳೂರು(ಗ್ರಾ) | 4.530 |
| 3 | ಬೆಂಗಳೂರು(ನ) | 8.683* |
| 4 | ಬೆಳಗಾಂ | 134.559 |
| 5 | ಬೀದರ್ | 6.479 |
| 6 | ಬಳ್ಳಾರಿ | 3.959 |
| 7 | ಬಿಜಾಪುರ | 9.656 |
| 8 | ಚಿಕ್ಕಮಗಳೂರು | 9.962 |
| 9 | ಚಿಕ್ಕಬಳ್ಳಾಪುರ | 3.799 |
| 10 | ಚಿತ್ರದುರ್ಗ | 1.434 |
| 11 | ದಕ್ಷಿಣ ಕನ್ನಡ | 40.383 |
| 12 | ದಾವಣಗೆರೆ | 10.614 |
| 13 | ಗುಲ್ಬರ್ಗಾ | 7.787 |
| 14 | ಹಾವೇರಿ | 9.657 |
| 15 | ಕೊಡಗು | 1.653 |
| 16 | ಮಂಡ್ಯ | 4.374 |
| 17 | ರಾಮನಗರ | 6.615 |
| 18 | ರಾಯಚೂರು | 1.477 |
| 19 | ಶಿವಮೊಗ್ಗ | 44.718 |
| 20 | ಉಡುಪಿ | 65.997 |
| | ಒಟ್ಟು | 400.00 |

*ರೂ.4.594ಲಕ್ಷ ಸರ್ಕಾರದಿಂದ ಸೂಚಿಸುವ ಯೋಜನೆಯ ಆಡಳಿತಾತ್ಮಕ ವೆಚ್ಚಗಳಿಗೆ ಒಳಗೊಂಡಿರುತ್ತದೆ.

ನಿರ್ದೇಶಕರು (ಗ್ರಾಮೂಸೌ–2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.